# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ 10.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಶಿವಕುಮಾರ್ ಬಿನ್ ಶಿವಲಿಂಗಪ್ಪ<br>46 ವರ್ಷ<br>ವ್ಯವಸಾಯ<br>ಅಳ್ಳೇನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ಪ್ರತಿ ವಾದಿ ಪರ ವಕೀಲರಾದ ಶ್ರೀ ಸಿ ಎಸ್ ಎ ರವರಿಂದ

ವಾದಿ ಸಿದ್ದಲಿಂಗಯ್ಯ ರವರು ಬಂದು ಸಾಕ್ಷಿ ಹೇಳುವಂತೆ ಕರೆದಿದ್ದರಿಂದ ನೀವು ಬಂದು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿ. ವಾದಿಯ ತಂದೆ ಮತ್ತು ನಿಮ್ಮ ತಂದೆಯ ನಡುವೆ ಏನು ಸಂಬಂಧ ಎಂದರೆ ಸಾಕ್ಷಿಯು ಅಣ್ಣ ತಮ್ಮಂದಿರು ಎಂದು ನುಡಿಯತ್ತಾರೆ. ಸಾಕ್ಷಿ ಮುಂದುವರೆದು ವಾದಿ ನನಗೆ ಚಿಕ್ಕಪ್ಪ ಆಗಬೇಕು ಎಂದು ನುಡಿಯುತ್ತಾರೆ. ವಾದಿಯು ನಿಮ್ಮ ಚಿಕ್ಕಪ್ಪನಾಗಿರುವುದರಿಂದ ಅವರನ್ನು ಕಂಡರೆ ನಿಮಗೆ ಪ್ರೀತಿ ವಿಶ್ವಾಸ ಇರುತ್ತದೆ ಎಂದರೆ ಸಾಕ್ಷಿಯು ಸಂಬಂಧ ಆಗಿರುವುದರಿಂದ ಇದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ನೀವು ಯಾವುದಾದರೂ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದ್ದಿರಾ ಎಂದರೆ ಸಾಕ್ಷಿಯು ನೋಡಿದ್ದೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ದಾಖಲಾತಿಗಳನ್ನು ನೀವು ನೋಡಿದ್ದಿರಿ ಎಂದರೆ ಸಾಕ್ಷಿಯು ಪಂಚಾಯಿತಿ ಪಾರಿಕತ್ತು ಮತ್ತು ಖಾತಾ extract ಅನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಎಷ್ಟು

ಅಳತೆಗೆ ಈ ದಾವಾ ಸಲ್ಲಿಸಿದ್ದಾರೆ ಎಂದು ಹೇಳಲು ಅಗುತ್ತಾದಾ ಎಂದರೆ ಸಾಕ್ಷಿಯು ಪೂರ್ವ ಪಶ್ಚಿಮ 51 ಅಡಿ. ಉತ್ತರ ದಕ್ಷಿಣ 56 ಅಡಿಗಳು ಎಂದು ನುಡಿಯತ್ತಾರೆ. ದಾವಾ ಅನುಸೂಚಿ ಸ್ವತ್ತು ವಾದಿಗೆ ಸಂಬಂಧಿಸಿದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ, ಗ್ರಾಮ ಪಂಚಾಯಿತಿ ಅಧಿಕಾರಿಯೊಂದಿಗೆ ಶಾಮೀಲು ಅಗಿ ಖಾತಾ extract ಮತ್ತು ಇತರೆ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ವಾದಿಯು ಈ ದಾವಾ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನೀವು ಯಾವ ಊರಿನಲ್ಲಿ ವಾಸವಾಗಿದ್ದಿರಿ ಎಂದರೆ ಸಾಕ್ಷಿಯು ಅಳ್ಳೇನಹಳ್ಳಿ ಗ್ರಾಮ ಎಂದು ನುಡಿಯುತ್ತಾರೆ. ನಿಮಗೆ ಓದಲು ಮತ್ತು ಬರೆಯಲು ಬರುತ್ತದಾ ಎಂದರೆ ಸಾಕ್ಷಿಯು ಬರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ.8 ರ ಗ್ರಾಮ ನಕ್ಷೆಯನ್ನು ತೋರಿಸಿ ಸದರಿ ನಕ್ಷೆಯಲ್ಲಿ ಅಳ್ಳೇನಹಳ್ಳಿ ಗ್ರಾಮದಿಂದ ಪೂರ್ವ ದಿಕ್ಕಿಗೆ ಜೇಗನಹಳ್ಳಿ ಗ್ರಾಮಕ್ಕೆ ಒಂದು ರಸ್ತೆ ಹೋಗುತ್ತದೆ ಎಂದರೆ ಊರಿನಿಂದ ಹೋಗುತ್ತದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯಿಂದ ದಕ್ಷಿಣಕ್ಕೆ ಸ.ನಂ.11, 14, 17, 18 ಮತ್ತು ಇತರೆ ಸ.ನಂಬರ್ ನ ಜಮೀನುಗಳು ಇರುತ್ತವೆ ಎಂದರೆ ಸರಿ. ಸದರಿ ರಸ್ತೆಯಿಂದ ಉತ್ತರಕ್ಕೆ ಅಳ್ಳೇನಹಳ್ಳಿ ಗ್ರಾಮ ಠಾಣಾ ಬರುತ್ತದೆ ಎಂದರೆ ಸಾಕ್ಷಿಯು ಊರಿನ ಮಧ್ಯ ಭಾಗದಲ್ಲಿ ಸದರಿ ರಸ್ತೆ ಹಾದು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಸ.ನಂ.14 ಮತ್ತು ಗ್ರಾಮ ಠಾಣಾದ ಮಧ್ಯದಲ್ಲಿ ಇರುವ ಆಸ್ತಿ ಸಾರ್ವಜನಿಕ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಿದ್ದಲಿಂಗಯ್ಯ ನವರ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ಸ.ನಂ.14 ರ ಉತ್ತರಕ್ಕೆ ಸದರಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಉತ್ತರಕ್ಕೆ ಊರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾರ್ವಜನಿಕ ಆಸ್ತಿಯಲ್ಲಿ 244 ಚದರ ಮೀಟರ್ ಆಸ್ತಿಯ ರಸ್ತೆಯ ಜಾಗವನ್ನು ವಾದಿಯು ಅತೀ ಕ್ರಮ ಪ್ರವೇಶ ಮಾಡಿ ಕಾಯಿ ಶೆಡ್ ಅನ್ನು ನಿರ್ಮಿಸಲು ಪ್ರಯತ್ನ ಪಟ್ಟಿರುತ್ತಾನೆಂದು ಪ್ರತಿವಾದಿಯು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ತಹಸೀಲ್ದಾರ್ ರವರಿಗೆ ದೂರು ನೀಡಿದ್ದರು ಎಂದರೆ ಸರಿ. ದಿಃ 15.12.2020 ರಂದು ತಹಸೀಲ್ದಾರ್ ರವರ ಆದೇಶದಂತೆ ಗ್ರಾಮ

ಲೆಕ್ಕಿಗರು, ಕಂದಾಯ ತನಿಖಾಧಿಕಾರಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿಮ್ಮ ಊರಿಗೆ ಬಂದು ಜಂಟಿ ತನಿಖೆ ಮಾಡಿ ಅಳತೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಅಳತೆ ಮಾಡಿದ್ದಾರೆ ಆದರೆ ವಾದಿಯ ಸೈಟಿನ ನೇರಕ್ಕೆ ಅವರ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ವಾದಿಯು ರಸ್ತೆಯ ಜಾಗವನ್ನು ಒತ್ತುವರಿ ಮಾಡಲು ಪ್ರಯತ್ನ ಪಟ್ಟಿದ್ದಾರೆ ಎಂದು ಅಳತೆ ಮಾಡಿ ವಾದಿಗೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ.

2. ಸ.ನಂ.14/5 ರಲ್ಲಿ ಪ್ರತಿವಾದಿಯ ಆಸ್ತಿ ಇರುತ್ತದೆ ಎಂದರೆ ಸರಿ. ಸ.ನಂ.14/5 ರ ಪ್ರತಿವಾದಿಯ ಆಸ್ತಿಯ ಉತ್ತರಕ್ಕೆ ಇರುವ ರಸ್ತೆಯ ಮೂಲಕವೇ ಪ್ರತಿವಾದಿಯು ತನ್ನ ಮನೆಗೆ ಓಡಾಡಬೇಕು ಎಂದರೆ ಸರಿಯಲ್ಲ. ಒಂದು ವೇಳೆ ವಾದಿಯು ರಸ್ತೆಯನ್ನು ಕಬಳಿಸಲು ಸಾಧ್ಯವಾದರೇ ನೀವು ಅವರ ಅಣ್ಣ ತಮ್ಮಂದಿರು ಅಗಿರುವುದರಿಂದ ಮುಂದುವರೆದ ರಸ್ತೆಯನ್ನು ಕೂಡ ನೀವು ಕಬಳಿಸಬಹುದು ಎಂಬ ಉದ್ದೇಶದಿಂದ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ವಾದಿಗೆ ಯಾವುದೇ ಹಕ್ಕು, ಹಿತಾಸಕ್ತಿ, ಸ್ವಾಧೀನಾನುಭವ ಇಲ್ಲ ಎಂದರೆ ಸರಿಯಲ್ಲ. ರಸ್ತೆಯ ಜಾಗವನ್ನು ಕಬಳಿಸುವ ಉದ್ದೇಶದಿಂದ ಸಲ್ಲಿಸಿರುವ ದಾವೆಗೆ ಸಹಾಯವಾಗಲೀ ಎಂದು ನೀವು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**.

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.